ಮಹಾವೀರ ಕಾಸರ, ಚನ್ನಗಿರಿ
*ಮತದಾರರ ಪಟ್ಟಿಯಲ್ಲಿ 2 ಕಡೆ ಹೆಸರಿದ್ದರೆ ಅಪರಾಧ. ಆದರೆ ಅಭ್ಯರ್ಥಿಗಳು 2 ಕ್ಷೇತ್ರಗಳಿಂದ ಸ್ಪರ್ಧಿಸುವುದು ಏಕೆ ಅಪರಾಧವಲ್ಲ?*




ಸ್ಪರ್ಧಾಕ್ಷೇತ್ರ ಪ್ರೇಯಸಿಯಂತೆ, ಮತ ಮಡದಿಯಂತೆ; ಪ್ರೇಯಸಿಯರು ಎಷ್ಟಾದರೂ ಇರಬಹುದು, ಮಡದಿ ಒಬ್ಬಳೇ.

ಜಾಕೋಬ್ ಡಿಸೋಜ, ಕುರುವಳ್ಳಿ
*ಮನುಷ್ಯನ ಜೀವನಕ್ಕೆ ಮುಖ್ಯವಾಗಿ ಬೇಕಾಗಿರುವುದು ಯಾವುದು?*
ಸಿರಿವಂತ ಮಾವನ ಸೈನ್ ಹಾಕಿದ ಬ್ಲ್ಯಾಂಕ್ ಚೆಕ್‌ಬುಕ್.

ಆರಿಫ್, ದಾವಣಗೆರೆ
*ಈ ಸಮಾಜದಲ್ಲಿ ಸತ್ಯಕ್ಕಿಂತ ಸುಳ್ಳಿಗೇ ಪ್ರಾಧಾನ್ಯತೆ ಹೆಚ್ಚೇಕೆ?*
ಸತ್ಯ ಅದೇ ಓಲ್ಡ್ ಮಾಡಲ್. ಸುಳ್ಳು ದಿನದಿನವೂ ಹೊಸ ಹೊಸ ಮಾಡಲ್‌ಗಳಲ್ಲಿ ಲಭ್ಯ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಚುನಾವಣೆಯಲ್ಲಿ ನಿಲ್ಲಲು, ಗೆಲ್ಲಲು ಇರಲೇಬೇಕಾದ ಅರ್ಹತೆಗಳೇನು?*



ಚುನಾವಣೆಯಷ್ಟೇ ಅಲ್ಲ, ಎಲ್ಲೇ ಆದರೂ ನಿಲ್ಲಲು ಮಂಡಿ ಸರಿಯಿರಬೇಕು, ಗೆಲ್ಲಲು ಮಂಡೆ ಸರಿಯಿರಬೇಕು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಭಕ್ತರನ್ನು ಕಾಪಾಡುವ ದೇವಾನುದೇವತೆಗಳ ಕೈಯಲ್ಲಿ ಆಯುಧಗಳೇಕೆ?*
ಕೊಳಕರಿಗೆ ಶಿಕ್ಷೆ ಕೊಡುವಾಗ ಕೈ ಗಲೀಜಾಗದಿರಲೆಂದು.

ಎಂಎಸ್. ಗುರುರಾಜಾಚಾರು, ಬಳ್ಳಾರಿ
*ಗಂಡಹೆಂಡಿರ ಮಧ್ಯೆ ಕೂಸು ಬಡವಾಯ್ತು. ರಾಜಕೀಯ ನಾಯಕರ ಮಧ್ಯೆ?*
ನ್ಯೂಸ್ ಚಾನಲ್ ಶ್ರೀಮಂತವಾಯ್ತು.

ಎಸ್.ಎಸ್. ಸುಬ್ರಹ್ಮಣ್ಯ, ಹಾಸನ
*ಸೋತು ಸುಣ್ಣವೇ ಏಕೆ ಆಗಬೇಕು?*
ಮಾತಿರುವುದೇ ಸುಣ್ಣ-ಬಣ್ಣ ಎಂದು; ಗೆದ್ದವರು ರಂಗೇರುತ್ತಾರೆ, ಸೋತವರು ಸುಣ್ಣ! {ಆದರೆ... ಅಸಲಿ ಪದ ಸುಣ್ಣ ಅಲ್ಲ, ಕ್ಷುಣ್ಣ.}

ಪವನ್ ಕುಮಾರ್ ಜೋಶಿ, ಬಳ್ಳಾರಿ
*ಕೂಡಿ ಬಾಳಿದರೆ ಸ್ವರ್ಗ ಸುಖ ಸರಿ. ಬೇರೆ ಬೇರೆ ಬಾಳಿದರೆ ಎಂಥಾ ಸುಖ?*
ಟ್ರಾನ್ಸ್‌ಫರ್ ಆಗುವವರು ಅನುಭವಿಸುವ ವರ್ಗ ಸುಖ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಪ್ರಾಣಿಗಳಿಗೆ ಎರಡು ಕೊಂಬುಗಳು ಇರುವಂತೆ ಮನುಷ್ಯರಿಗೂ ಇದ್ದಿದ್ದರೆ?*
ಹೆರಳನ್ನು ಅವುಗಳಿಗೆ ಬಳ್ಳಿಯಂತೆ ಹಬ್ಬಿಸಿ, ಕೊಂಬುಗಳ ತುದಿಯಿಂದ ತುದಿಗೆ ದಾರದಂತೆ ಕಟ್ಟಿ, ತೋರಣದಂತೆ ಹೂ ಮುಡಿಯುತ್ತಿದ್ದರು.

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*ಹೆಂಡತಿ ನನ್ನ ತೊಡೆಯಮೇಲೆ ನಿದ್ರಿಸುತ್ತಿರುವಾಗಲೇ ಪ್ರೇಯಸಿ ಬಂದು 'ನಿಮ್ಮ ತೊಡೆಯ ಮೇಲೆ ಸ್ವಲ್ಪ ಹೊತ್ತು ನಿದ್ರಿಸಬಹುದೆ?' ಎನ್ನುತ್ತಿದ್ದಾಳಲ್ಲಾ...?*
ಎಚ್ಚರ! ಹೆಂಡತಿಗೆ ನಿದ್ರಾಭಂಗವಾದರೆ ನಿಮಗೆ ಊರುಭಂಗ ಖಚಿತ!

ವಿ. ಹೇಮಂತಕುಮಾರ್, ಬೆಂಗಳೂರು
*ಹುಡುಗಿಯರು ಕಪ್ಪು ಸೀರೆ, ಕಪ್ಪು ಕಾಡಿಗೆ ಇಷ್ಟಪಡುತ್ತಾರೆ. ಕಪ್ಪು ಗಂಡನನ್ನೇಕೆ ಬಯಸುವುದಿಲ್ಲ?*
ಅವನನ್ನೂ ಸೀರೆಯಂತೆ ಬದಲಾಯಿಸಿ, ಕಾಡಿಗೆಯಂತೆ ಅಳಿಸಿಹಾಕಲು ಆಗಿದ್ದಿದ್ದರೆ ಇಷ್ಟಪಡುತ್ತಿದ್ದರಂತೆ.

ಕುಮಾರ ಚಲವಾದಿ, ಹೊಳೆನರಸೀಪುರ
*ನನಗೆ ಬಾಲ ಬಂದು ಅತ್ತಿತ್ತ ಹಾರುತ್ತಿರುವಂತೆ ಕನಸಾಯಿತು. ಇದು ಏನಾದರೂ ಅಶುಭ ಸಂಕೇತವೆ?*
ಅಕಟಕಟಾ! ನೀವು ಶೀಘ್ರದಲ್ಲೇ ನಿಮ್ಮನ್ನು ಕೋತಿಯಂತೆ ಆಡಿಸುವವಳ ಕೈವಶವಾಗಲಿದ್ದೀರಿ.

## ಬಹುಮಾನಿತ ಪ್ರಶ್ನೆ

ಕೃಷ್ಣಮೂರ್ತಿ ಎನ್. ಮನ್ನಾರ್, ಶಿವಮೊಗ್ಗ
*ಕಪ್ಪೆ, ಮೀನುಗಳು ಹುಟ್ಟಿನಿಂದ ಸಾಯುವವರೆಗೆ ಗಂಗೆಯಲ್ಲಿ ಇರುತ್ತವೆ. ಆದರೆ ಅವು ಯೋಗಿಗಳಾಗಬಲ್ಲವೆ?*
ಅಂತಹ ಮಲಿನ ಜಲದಲ್ಲಿದ್ದರೆ... ರೋಗಿಗಳಾಗಬಲ್ಲವು.

ಆರ್. ಮಧುಸೂದನ್, ಹಾಸನ
*ಯಾವಾಗಲೂ ಮಿಸ್ಡ್ ಕಾಲ್ ಕೊಡುವ ಆ ಚೆಲುವೆಯ ಹೆಸರು ಏನಿರಬಹುದು?*
ಮಿಸ್ ಕರೆನ್ ಸಿ. ಲೆಸ್ಸರ್

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ
*'ಹೆಂಡತಿಗೆ ಬಡಿಯುವುದನ್ನು ನಿಲ್ಲಿಸಿದ್ದೀಯಾ?' ಎಂದು ತಲೆ ತಿನ್ನೋ ಪ್ರಶ್ನೆ ಕೇಳ್ತಾರೆ. ಏನೆಂದು ಉತ್ತರಿಸಲಿ ರಾಮಾ?*
ಬಡಿಸುವುದು ಎಂದಿದ್ದನ್ನು ಬಡಿಯುವುದು ಎಂದು ತಪ್ಪು ಕೇಳಿಸಿಕೊಂಡಿದ್ದೀರಿ ಎನ್ನಿ.

ಎಂ.ಎಸ್. ಸೋಮಶೇಖರ್, ಮೈಸೂರು
*ಕೈಯಿಂದ ಊಟ ಮಾಡುವುದಕ್ಕೂ, ಚಮಚದಿಂದ ಊಟ ಮಾಡುವುದಕ್ಕೂ ಏನು ವ್ಯತ್ಯಾಸ?*



ಚಮಚ ಹಲವಾರು ಬಾಯಿಗಳಿಗೆ ಹೋಗುತ್ತದೆ. ನಮ್ಮ ಕೈ ನಮ್ಮ ಬಾಯಿಗೆ ಮಾತ್ರ!

ಎಸ್. ಪ್ರಭಾ, ಬೆಂಗಳೂರು
*ಸಂಸಾರ ಎರಡು ಚಕ್ರದ ಬಂಡಿ. ಅದನ್ನು ಮೂರು, ನಾಲ್ಕು ಚಕ್ರಕ್ಕೆ ಏಕೆ ಹೋಲಿಸುವುದಿಲ್ಲ?*
ಮೂರಾದರೆ ಅಡ್ಡಾದಿಡ್ಡಿ, ನಾಲ್ಕಾದರೆ ದುಬಾರಿಯಾದ್ದರಿಂದ.

ಎಂ.ಜಿ. ಶಿವರಾಂ, ಬೆಂಗಳೂರು
*'ಜೀವನಮಾರ್ಗವದನೂಹ್ಯ' ಅಲ್ಲವೇ?*
ಅಹುದಹುದು; ಚಾ, ಟೀ, ಎನ್ನುತ್ತಿದ್ದ ವ್ಯಕ್ತಿ ದೇಶದ ಚಾಟಿ ಹಿಡಿದುದೇ ಇದಕ್ಕೆ ನಿದರ್ಶನವು.

■ ರಾಮ್